



# ಕೇಕ್ ಕಲಾಕೃತಿಗಳು!



ಹುಟ್ಟಿದ ಹಬ್ಬವಾಗಲೀ ಅಥವಾ ಇತರೇ ಸಮಾರಂಭವಾಗಲಿ ಕೇಕ್ ಕತ್ತರಿಸಿ ಅದನ್ನು ಸಂಭ್ರಮಿಸಿ ತಿನ್ನುವುದು ಇತ್ತೀಚೆಗೆ ವಾಡಿಕೆಯಾಗಿದೆ. ಆದರೆ ಎಲೆನಾ ನಟ್ ತಯಾರಿಸಿದ ಕೇಕ್ ಗಳನ್ನು ನೀವು ನೋಡಿದರೆ ಕತ್ತರಿಸಲು ಬಿಲ್ಕುಲ್ ಮನಸ್ಸು ಬರುವುದಿಲ್ಲ!

ರಷ್ಯಾ ದೇಶದ ಕಾಲಿನಿಂಗಾಡ್ ನಲ್ಲಿರುವ 31 ವರ್ಷ ವಯಸ್ಸಿನ ಈ ತರುಣಿ ಕೇಕ್ ತಯಾರಿಕೆಯಲ್ಲಿ ಅಪಾರ ನೈಪುಣ್ಯ ಪಡೆದಿದ್ದಾಳೆ. ಎಲೆನಾ ನಟ್‌ಳ ಜನಪ್ರಿಯ ಇನ್‌ಸ್ಟಾಗ್ರಾಂ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಕೇಕ್ ಚಿತ್ರಗಳನ್ನು ನೋಡಿದವರೆಲ್ಲಾ ಅಚ್ಚರಿಗೊಂಡಿರುವುದರಲ್ಲಿ ಯಾವ ಅನುಮಾನವೂ ಇಲ್ಲ.

ಈ ಕೇಕ್‌ಗಳನ್ನು ನೋಡಿದಾಗ ಇವುಗಳು ತಿನ್ನಲು ಮಾಡಿರುವ ಕೇಕ್ ಎಂದು ಅನ್ನಿಸದೆ ಉತ್ಕೃಷ್ಟ ಕಲಾಕೃತಿಯೇನೋ ಎಂಬಂತೆ ಭಾಸವಾಗುವುದಂತೂ ಖಂಡಿತ. ಚಿತ್ರವಿಚಿತ್ರ ಆಕಾರಗಳನ್ನು ಹಿಮಗಡ್ಡೆಯಿಂದ ಎರಕ ಹೊಯ್ದಿದ್ದಾಳೆಯೋ ಅಥವಾ ತಿನ್ನಬಹುದಾದ ಆಹಾರ ಬಣ್ಣಗಳನ್ನು ಬಳಸಿ ಅಸಾಮಾನ್ಯ ದೃಶ್ಯಗಳನ್ನೋ, ವ್ಯಕ್ತಿ ಚಿತ್ರಗಳನ್ನೋ ಕಲಾತ್ಮಕವಾಗಿ ಬಿಂಬಿಸಿದ್ದಾಳೆಯೋ ಎಂದೆನಿಸುತ್ತದೆ. ನೋಡಲು ಒಂದಕ್ಕಿಂತ ಮತ್ತೊಂದು ಸುಂದರ ಎನ್ನಿಸುವ ಕೇಕ್‌ಗಳು ತಿನ್ನಲು ಅದೆಷ್ಟು ರುಚಿಕರವೋ ಗೊತ್ತಾಗಿಲ್ಲ. ಆದರೆ ಈಕೆಗೆ 140,000 ಕ್ಕೂ ಅಧಿಕ ಸಂಖ್ಯೆಯಲ್ಲಿ ಇನ್‌ಸ್ಟಾಗ್ರಾಂ ಫಾಲೋವರ್ಸ್ ಇದ್ದಾರಂತೆ.

ಒಂದು ಹೊಸ ಕೇಕ್ ಚಿತ್ರವನ್ನು ನೋಡಿದ ಕೂಡಲೇ ಮತ್ತೊಂದು ಕೇಕ್ ಚಿತ್ರವನ್ನು ನೋಡಲು ಅವರೆಲ್ಲಾ ಕಾತುರದಿಂದ ಕಾಯುತ್ತಾ ಇರುತ್ತಾರಂತೆ. ಕೇಕ್ ತಯಾರಿಕೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಕೈಗೊಂಡು ಅದರಲ್ಲಿ ನಾವೀನ್ಯತೆ ಕಲೆಯನ್ನು ಹೊರ ಹೊಮ್ಮುತ್ತಿರುವ ಎಲೆನಾ ನಟ್‌ಳ ಕೇಕ್‌ಗಳು ಬರೀ ಕೇಕ್ ಗಳಲ್ಲ! ನಿಜಕ್ಕೂ ಅದ್ಭುತ ಕಲಾಕೃತಿಗಳು!

■ ಪ್ರಿಯಾಂಕ ವಿ.ಹೆಚ್.